ANNEXURE-II

Expenditure incurred towards Seed Margin Money to New SSI/Tiny Units in Karnataka State.

(Rs. in Lakhs)

Sl. No.	Name of the District	1989-90	1990-91	1991-92
1.	Bangalore (R)	5.00	4.05	–
2.	Bangalore (U)	2.362	–	2.10
3.	Belgaum	4.00	4.84	5.994
4.	Bellary	3.295	1.50	1.558
5.	Bidar	3.096	2.80	2.50
6.	Bijapur	3.110	1.795	1.857
7.	Chitradurga	8.00	7.21	3.758
8.	Chickmagalur	1.96	3.088	3.997
9.	Mangalore (D.K.)	8.00	9.813	11.521
10.	Dharwad	9.986	14.997	12.596
11.	Gulbarga	2.983	3.50	8.00
12.	Hassan	4.202	4.607	3.657
13.	Kolar	6.00	–	9.566
14.	Mercara	2.217	1.994	0.53
15.	Mandya	5.784	2.991	3.488
16.	Mysore	4.906	10,465	11,506
17.	Raichur	5.00	5.00	8.00
18.	Shimoga	8.00	8.50	3.947
19.	Tumkur	7.00	6.252	5.256
20.	Karwar	4.40	4.253	4.619
	Total :	99.301	97.655	104.552

ಬೀದರ್ ಜಿಲ್ಲೆಯಲ್ಲಿ ರೇಷ್ಮೆ ವ್ಯವಸಾಯವನ್ನು ಅಭಿವೃದ್ಧಿ ಪಡಿಸುವ ಬಗ್ಗೆ

379 (194): ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್):–

ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಔರಾದ್ ತಾಲ್ಲೂಕಿನಲ್ಲಿ ಇತ್ತೀಚಿನ ವರ್ಷಗಳಲ್ಲಿ ಅಲ್ಲಿನ

ರೈತರು ರೇಷ್ಮೆ ಬೆಳೆಯನ್ನು ಬೆಳೆಯುತ್ತಿರುವುದರಿಂದ ಬೀದರ್ ಜಿಲ್ಲೆಯಲ್ಲಿ ಮತ್ತು ಔರಾದ್ ತಾಲ್ಲೂಕಿನ ರೈತರುಗಳಿಗೆ ವ್ಯವಸಾಯವನ್ನು ಪ್ರೋತ್ಸಾಹಿಸುವ ಸಲುವಾಗಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು;

ಆ) ಔರಾದ್ ತಾಲ್ಲೂಕಿನಲ್ಲಿ ಬೆಳೆದ ರೇಷ್ಮೆ ಗೂಡುಗಳನ್ನು ಸುಮಾರು 900 ಕಿ.ಮೀ. ದೂರದಲ್ಲಿರುವ ರಾಮನಗರ ಚನ್ನಪಟ್ಟಣದಲ್ಲಿರುವ ರೇಷ್ಮೆಗೂಡಿನ ಮಾರುಕಟ್ಟೆಗೆ ತೆಗೆದುಕೊಂಡು ಮಾರಾಟ ಮಾಡುವಲ್ಲಿ ರೈತರು ಪಡೆಯುತ್ತಿರುವ ತೀವ್ರ ತೊಂದರೆಯನ್ನು ತಪ್ಪಿಸುವ ಸಲುವಾಗಿ ಔರದಾಬಾದಿನಲ್ಲಿಯೇ ಒಂದು ರೇಷ್ಮೆ ಗೂಡಿನ ಮಾರುಕಟ್ಟೆಯನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರ ಪರಿಶೀಲಿಸುವುದೇ ?

ಡಾ।। ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):–

ಅ) 1. ಒಳ್ಳೆ ಗುಣಮಟ್ಟದ ಮೊಟ್ಟೆಗಳನ್ನು ಒದಗಿಸಲು ಒಂದು ಮಾದರಿ ಗ್ರೈನೇಜನ್ನು ಸ್ಥಾಪಿಸಲಾಗಿದೆ. ಇದು ಆಧುನಿಕ ಕೋಲ್ಡ್‌ಸ್ಟೋರೇಜ್ ಹೊಂದಿದೆ.
2. ತಾಂತ್ರಿಕ ಸಲಹೆಯನ್ನು ರೈತರಿಗೆ ಕೊಡಲು ಈಗಾಗಲೇ 4 ತಾಂತ್ರಿಕ ಸೇವಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.
3. ಚಾಕಿ ಹುಳು ಸಾಕಾಣಿಕೆಗೆ 21 ಚಾಕಿ ಸಾಕಣೆ ಕೇಂದ್ರಗಳನ್ನು ಸ್ಥಾಪಿಸಿದೆ.
4. ಗೂಡಿನ ಮಾರಾಟಕ್ಕೆ ಒಂದು ಮಾರುಕಟ್ಟೆ ಸ್ಥಾಪಿಸಿದೆ.
5. 3 ನೂಲು ಬಿಚ್ಚಾಣಿಕೆ ಘಟಕಗಳನ್ನು ಸ್ಥಾಪಿಸಲಾಗಿದೆ.
6. ಒಂದು ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರ ಸ್ಥಾಪಿಸಲಾಗಿದೆ.
7. ರೇಷ್ಮೆ ಬೆಳೆಗಾರರಿಗೆ ಹೊಸದಾಗಿ ರೇಷ್ಮೆ ಕೃಷಿ ತೆಗದುಕೊಳ್ಳುವವರಿಗೆ ತರಬೇತಿ ಕೊಡಲಾಗುತ್ತಿದೆ.
8. ರೇಷ್ಮೆ ಕೃಷಿಕರು ತಾವು ಉತ್ಪನ್ನ ಮಾಡಿದ ಗೂಡನ್ನು ಅಲ್ಲೇ ಇರುವ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದರೆ ಒಂದು ಕೆ.ಜಿ. ಗೂಡಿಗೆ 5 ರೂ. ಪ್ರೋತ್ಸಾಹ ಧನ ಕೊಡಲಾಗುತ್ತಿದೆ.
9. ಒಂದು ಕೆ.ಜಿ. ರೇಷ್ಮೆ 50 ರೂ. ಪ್ರೋತ್ಸಾಹ ಧನ ಕೊಡಲಾಗುತ್ತಿದೆ.
10. ಬೈವೋಲ್ಟೈನ್ ಗೂಡನ್ನು ಉತ್ಪನ್ನ ಮಾಡಲು ಪ್ರೋತ್ಸಾಹ ಧನ ಕೊಡಲಾಗುತ್ತಿದೆ.
11. ಡಿ.ಪಿ.ಎ.ಪಿ. ಯೋಜನೆಯಡಿಯಲ್ಲಿ ಹಿಪ್ಪುನೇರಳೆ ಸಸ್ಯಗಳನ್ನು ಉಚಿತವಾಗಿ ರೈತರಿಗೆ ವಿತರಣೆ ಮಾಡಲಾಗುತ್ತಿದೆ.
12. ರೇಷ್ಮೆ ಕೃಷಿಯಲ್ಲಿ ಮಹಿಳೆಯ ಪಾತ್ರ ಪ್ರಮುಖವಾಗಿರುವುದರಿಂದ ಅವರನ್ನು ಪ್ರೋತ್ಸಾಹಿಸಲು ಅವರಿಗೆ ಚಾಕಿ ಸಾಕಾಣಿಕಾ ಕೇಂದ್ರವನ್ನು ಸ್ಥಾಪಿಸಲು ನೂಲು ಬಿಚ್ಚಾಣಿಕೆ ಘಟಕ ಸ್ಥಾಪಿಸಲು ಅಥವಾ ರೇಷ್ಮೆ ಕೃಷಿಗೆ ಬೇಕಾದ ಸೋಂಕು ನಿರೋಧಕಗಳನ್ನು ಮತ್ತು ಹುಳು ಸಾಕಾಣಿಕೆಗೆ ಬೇಕಾದ ಸಲಕರಣೆಗಳನ್ನು ಮಾರಾಟ ಮಾಡಲು ಮೂಲ ಬಂಡವಾಳ ಒದಗಿಸುವ ಕಾರ್ಯಕ್ರಮ ಇದೆ. ಇದರಲ್ಲಿ ಶೇಕಡ 75 ರಷ್ಟು ಅನುದಾನದ ಪ್ರಕಾರ ಬಿಡುಗಡೆ ಮಾಡಲಾಗುತ್ತಿದೆ.

ಆ) ಸರ್ಕಾರವು ಹೊಸ ಪ್ರದೇಶಗಳ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಗೂಡುಗಳನ್ನು ವಹಿವಾಟು ಮಾಡಲು ಒಂದು ಕೆ.ಜಿ. ಗೂಡಿಗೆ ರೂ. 5–00 ರಂತೆ ಪ್ರೋತ್ಸಾಹ ಧನ ನೀಡಲಾಗುತ್ತಿದ್ದರೂ ರೇಷ್ಮೆ ಬೆಳೆಗಾರರು ದೂರದಲ್ಲಿರುವ ರಾಮನಗರ ರೇಷ್ಮೆಗೂಡಿನ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕ ಮತ್ತು ಪ್ರೋತ್ಸಾಹದಾಯಕವಾದ ಬೆಲೆ ದೊರಯುತ್ತಿರುವುದರಿಂದ ಗೂಡನ್ನು ಮಾರಲು ಬಂದು ಹೋಗುತ್ತಿರುತ್ತಾರೆ.

ಹುಡ್ಕೋ ಯೋಜನೆ ಕುರಿತು

381 (490): ಶ್ರೀ ಆಂಜನಮೂರ್ತಿ (ನೆಲಮಂಗಲ):–